# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ : ಎಡಿಸ್ ಆರ್.ಆರ್.ಟಿ.ಎಸ್.ಆರ್ 111/16-17.**

**ದಿನಾಂಕ : 26-10-2016.**

**ಉಪಸ್ಥಿತರು : ಡಾ. ರಾಜೇಂದ್ರ ಕೆ ವಿ .ಭಾ.ಆ.ಸೇ.**

**ಉಪವಿಭಾಗಾಧಿಕಾರಿ**

**ಪುತ್ತೂರು ಉಪವಿಭಾಗ ಪುತ್ತೂರು**

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಮುಕುಂದ ನಾಯಕ್,<br>ಬಿನ್.ವಿಶ್ವನಾಥ ನಾಯಕ್,<br>ವಿನಾಯಕನಗರ ,<br>ಕೋಡಿಂಬಾಡಿ ಗ್ರಾಮ,<br>ಪುತ್ತೂರು ತಾಲೂಕು ದ.ಕ. | -ಮತ್ತು- | ತಹಶೀಲ್ದಾರರು,<br>ಪುತ್ತೂರು ತಾಲೂಕು ದ.ಕ. |

**---**

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136 ರನ್ವಯ ಪುತ್ತೂರು ತಾಲೂಕು ಕೋಡಿಂಬಾಡಿ ಗ್ರಾಮದ ಸ.ನಂ. 63/2ಬಿ ರಲ್ಲಿ 0.08 ಎಕ್ರೆ ಜಮೀನಿನ ಪಹಣಿ ದಾಖಲಾತಿ ಸಂಬಂಧಿಸಿ ಪುತ್ತೂರು ತಹಶೀಲ್ದಾರರು ನೀಡಿದ ನಂಬ್ರ ಆರ್.ಆರ್.ಟಿ.ಸಿ.ಆರ್ 281/14-15 ದಿನಾಂಕ : 17-12-2014 ರತಹಶೀಲ್ದಾರರು ನೀಡಿದ ಹಿಂಬರಹ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಪುತ್ತೂರು ತಾಲೂಕು ಕೋಡಿಂಬಾಡಿ ಗ್ರಾಮದ ಸ.ನಂ. 63/2ಬಿ ರ ಪೈಕಿ ವಿಸ್ತೀರ್ಣ 0.08 ಎಕ್ರೆ ಜಮೀನು ಅಪೀಲುದಾರರ ಹಕ್ಕಿನ ಜಮೀನಾಗಿದ್ದು, ದಿನಾಂಕ 11-11-2014 BSNL ರವರಿಗೆ ಲೀಸ್ ಗೆ ನೀಡಲಾಗಿದೆ. ಸದ್ರಿ ಎಗ್ರಿಮೆಂಟ್ ನಂತೆ ಸಂಬಂಧಿತ ಪಹಣಿ ಕಲಂ 11 ರಲ್ಲಿ ದಾಖಲಾಗಬೇಕಾಗಿದ್ದು, ಕಲಂ 9 ಮತ್ತು 11 ಎರಡರಲ್ಲಿ ದಾಖಲಾಗಿರುತ್ತದೆ. ಈ ಬಗ್ಗೆ ತಹಶೀಲ್ದಾರರಿಗೆ ತಿದ್ದುಪಡಿಗೆ ಅರ್ಜಿ ನೀಡಲಾಗಿ ಈಗಾಗಲೇ ಮ್ಯುಟೇಶನ್ ಆದೇಶವಾಗಿರುವುದರಿಂದ ತಿದ್ದುಪಡಿಗೆ ಅವಕಾಶವಿಲ್ಲ ಸೂಕ್ತ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಬಹುದೆಂದು ಹಿಂಬರಹ ನೀಡಿರುತ್ತಾರೆ. ತಹಶೀಲ್ದಾರರು ನೀಡಿದ ಹಿಂಬರಹದಂತೆ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ : 31-08-2016 ರಂದು ಹಾಜರಾಗುವಂತೆ ನೋಟೀಸು ನೀಡಿ

ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ : 21-09-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಸಂಬಂಧಿತ ಪಹಣಿ ಕಲಂ 9 ರಲ್ಲಿ " BSNL " ಪುತ್ತೂರು ಲೀಸ್ ಡೀಡ್ ಎಂಬುವುದನ್ನು ತೆಗೆದು ಹಾಕಲು ಕೋರಿರುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ಮನವಿದಾರರು ಹಾಗೂ BSNL ನವರು ಮಾಡಿಕೊಂಡ ಲೀಸ್ ಡೀಡ್ ಕರಾರು ಪತ್ರದಂತೆ ಮ್ಯುಟೇಶನ್ ಆದೇಶವಾಗಿರುತ್ತದೆ. ಅದರಂತೆ ಸ.ನಂ. 63/2ಬಿ ಪೈಕಿ 0.08 ಎಕ್ರೆ ಜಮೀನಿನ ಪಹಣಿಯಲ್ಲಿ ಮೂಲ ಖಾತೆದಾರರೊಂದಿಗೆ ಜಂಟಿ ದಾಖಲಾಗಿರುತ್ತದೆ. ಒಪ್ಪಂದವನ್ನು BSNL ನವರೊಂದಿಗೆ ಬಾಡಿಗೆಗೆ ಮಾಡಿಕೊಂಡಿರುವುದರಿಂದ ಪಹಣಿ 9ನೇ ಕಲಂನಲ್ಲಿ ದಾಖಲಿಸಿರುವುದು ಸರಿಯಲ್ಲ. ಬಾಡಿಗೆ/ಲೀಸ್ ಒಪ್ಪಂದ ಪತ್ರದಂತೆ ಪಹಣಿ ಕಲಂ 11 ರಲ್ಲಿ ದಾಖಲಿಸಬೇಕಾಗಿರುವುದರಿಂದ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ.

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಪುತ್ತೂರು ತಾಲೂಕು ಕೋಡಿಂಬಾಡಿ ಗ್ರಾಮದ ಸ.ನಂ. 63/2B ವಿಸ್ತೀರ್ಣ 0.08 ಎಕ್ರೆಯ ಪಹಣಿಯಲ್ಲಿ ಕಲಂ 9 ರಲ್ಲಿನ " BSNL ಪುತ್ತೂರು ಲೀಸ್ ಡೀಡ್ " ಮತ್ತು 10 ನೇ ಕಲಂನಲ್ಲಿನ " ಕ್ರಯ " ಎಂಬ ಪದಗಳನ್ನು ತೆಗೆದು ಹಾಕಲು ನಿಯಮಾನುಸಾರ ಕ್ರಮವಹಿಸಲು ಪುತ್ತೂರು ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ:26-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ. ಕೆ.ವಿ, ಐ.ಎ.ಎಸ್

ಸಹಾಯಕ ಆಯುಕ್ತರು,

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರಿಗೆ,

ಪ್ರತಿ: ತಹಶೀಲ್ದಾರರು ಪುತ್ತೂರು ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.